APRIL 26, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಬೆಳಗಾವಿ ಜಿಲ್ಲೆ, ನಾಗರಗಾಳಿ ಗ್ರಾಮ** ಪಂಚಾಯಿತಿಗೆ, ಗಾಂಧಿ ಗ್ರಾಮ ಪುರಸ್ಕಾರದ, ಗರಿ.
- **ಕಲಬುರ್ಗಿ ಹಾಗೂ ಬೆಳಗಾವಿ ಜಿಲ್ಲೆಗಳಿಗೆ,** ತಲಾ 10 ಸಾವಿರ ಹಸು ಒದಗಿಸಲು, ಪಶು ಸಂಗೋಪನಾ ಇಲಾಖೆ, ಕ್ರಮ.
- **ಇಂದು, ವಿಶ್ವ ಬೌದ್ಧಿಕ ಆಸ್ತಿ ಹಕ್ಕು,** ದಿನಾಚರಣೆ.
- **ಮನ್ ಕಿ ಬಾತ್: 133ನೇ ಆವೃತ್ತಿ,** ಇಂದು ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

**ಈಗ ವಾರ್ತೆಗಳ ವಿವರ**

<><><>

**ಭಾರತ ಸಂವಿಧಾನದ, 73ನೇ ತಿದ್ದುಪಡಿಯಲ್ಲಿ** ಉಲ್ಲೇಖಿತ, ಅಂಶಗಳನ್ನು ಪಾಲಿಸಿ, ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಿರುವ, ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ನಾಗರಗಾಳಿ ಗ್ರಾಮ ಪಂಚಾಯಿತಿ, 2025ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ರಾಷ್ಟ್ರೀಯ ಪಂಚಾಯಿತಿರಾಜ್ ದಿನಾಚರಣೆ ಸಂದರ್ಭದಲ್ಲಿ, ನಾಗರಗಾಳಿ ಗ್ರಾಮ ಪಂಚಾಯಿತಿ, ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಇಲಾಖೆಯ ಶ್ಲಾಘನೆಗೆ ಪಾತ್ರವಾಗಿದೆ. ಧಾರವಾಡ–ರಾಮನಗರ ರಾಜ್ಯ ಹೆದ್ದಾರಿ ಮೇಲಿರುವ, ನಾಗರಗಾಳಿ ಗ್ರಾಮ ಪಂಚಾಯ್ತಿ, ಹಸಿರು ಗ್ರಾಮ ನಿರ್ವಹಣೆ, ವೈಜ್ಞಾನಿಕ ಹಾಗೂ ನಿಯಮಿತ ಕಸ ವಿಲೇವಾರಿ, ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಮತ್ತು ಪಾರದರ್ಶಕ ಆಡಳಿತ ನಿರ್ವಹಣೆಯಲ್ಲಿ, ದೇಶದ ಗಮನ ಸೆಳೆದಿದೆ.

<><><>

**ನಾಗರಗಾಳಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ,** ಬಾಲರಾಜ ಭಜಂತ್ರಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಪಿ.ಡಿ.ಓ. ಬಾಲರಾಜ ಭಜಂತ್ರಿ ಧ್ವನಿ 60 ಸೆಕೆಂದುಗಳು**

<><><>

**ಉತ್ತರ ಕರ್ನಾಟಕದ,** ಆರ್ಥಿಕ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ, ಹೊಸ ವೇಗ ನೀಡಲು, ಇನ್‌ಕಾಮೆಕ್ಸ್ ಆಯೋಜಿತವಾಗಿದೆ; ಆಧುನಿಕ ತಂತ್ರಜ್ಞಾನ ಹಾಗೂ ನಾವಿನ್ಯತೆಗಳ ಭವ್ಯ ಸಂಗಮದ ಪ್ರದರ್ಶಿನಿ ಗಮನ ಸೆಳೆಯುವಂತಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಶ್ಲಾಘಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಅಮರಗೋಳದ ಎ.ಪಿ.ಎಂ.ಸಿ. ಆವರಣದಲ್ಲಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಆಯೋಜಿಸಿದ, ಕೈಗಾರಿಕಾ ವಸ್ತು ಪ್ರದರ್ಶನ ಉದ್ಘಾಟಿಸಿ, ಅವರು ಮಾತನಾಡಿದರು. ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ ಸೇರಿದಂತೆ, ಇನ್‌ಕಾಮೆಕ್ಸ್ ಕೇವಲ ಯಂತ್ರೋಪಕರಣಗಳ ಪ್ರದರ್ಶನವಲ್ಲ; ಸ್ಥಳೀಯ ಉದ್ಯಮಿಗಳಿಗೆ, ಜಾಗತಿಕ ಮಟ್ಟದ ಸಂಪರ್ಕ ಕಲ್ಪಿಸುವ, ಮಹತ್ವದ ಸೇತುವೆ. ಹೂಡಿಕೆ ಹಾಗೂ ಉದ್ಯೋಗ ಸೃಷ್ಟಿಗೆ ಹೊಸ ಚೈತನ್ಯ ನೀಡಲಿದೆ ಎಂದರು.

<><><>

**'ತಂತ್ರಜ್ಞಾನದಲ್ಲಿ ಸ್ವಾಯತ್ತತೆ'** ಎಂಬ ಧ್ಯೇಯದೊಂದಿಗೆ, ಮೇ 16 ರಂದು ಬೆಂಗಳೂರಿನಲ್ಲಿ, 'ಪ್ಯಾನ್ – ಐಐಟಿ ಬೆಂಗಳೂರು ಸಮ್ಮಿಟ್' ಆಯೋಜಿಸಲಾಗಿದೆ ಎಂದು, ಇ ಆಡಳಿತ ಇಲಾಖೆಯ, ಪ್ರಧಾನ ಕಾರ್ಯದರ್ಶಿ, ಪಂಕಜಕುಮಾರ ಪಾಂಡೆ, ತಿಳಿಸಿದ್ದಾರೆ. ಪ್ಯಾನ್ ಐ.ಐ.ಟಿ. ಅಧ್ಯಕ್ಷ ಪ್ರಭಾತಕುಮಾರ ಮಾತನಾಡಿ, ನವೋದ್ಯಮಿಗಳು, 200ಕ್ಕೂ ಹೆಚ್ಚು ಬೀಜಧನ ಹೂಡಿಕೆದಾರರು ಸೇರಿದಂತೆ, 10 ಸಾವಿರ ಕ್ಷೇತ್ರ ತಜ್ಞರು ಭಾಗವಹಿಸಿ, ಹ್ಯಾಕಥಾನ್‌ನಲ್ಲಿ ನೈಜ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆ. ದೇಶದ 23 ಭಾರತೀಯ ತಂತ್ರಜ್ಞಾನ ಸಂಸ್ಥೆಗಳ, 5 ಲಕ್ಷಕ್ಕೂ ಹೆಚ್ಚು, ಹಿರಿಯ ವಿದ್ಯಾರ್ಥಿಗಳ, ಸಂಯುಕ್ತ ಚಿಂತನೆಯ ಫಲ, ಇ–ಸಮ್ಮಿಟ್, ಎಂದರು.

<><><>

**ಹಸು ಸಾಕಣೆ ಹಾಗೂ ಹೈನುಗಾರಿಕೆಯಿಂದ,** ಬಡವರ ಜೀವನ ನಿರ್ವಹಣೆಗೆ ಅನುಕೂಲ ಕಲ್ಪಿಸಲು, ರಾಜ್ಯ ಸರ್ಕಾರ, ಶೇಕಡ 25ರಷ್ಟು ಹಣಕಾಸಿನ ನೆರವು ನೀಡಲಿದ್ದು, ಕಲಬುರ್ಗಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ, ತಲಾ 10 ಸಾವಿರ ಹಸುಗಳ ಖರೀದಿಗೆ ಅವಕಾಶ ಕಲ್ಪಿಸಲಾಗುವುದು ಎಂದು, ಪಶು ಸಂಗೋಪನೆ ಖಾತೆ ಸಚಿವ ಕೆ.ವೆಂಕಟೇಶ ತಿಳಿಸಿದ್ದಾರೆ. ಬೆಳಗಾವಿಯ ಮಹಾಂತೇಶ ನಗರದ, ಪಶು ವೈದ್ಯಕೀಯ ಆಸ್ಪತ್ರೆ ಆವರಣದಲ್ಲಿ, ಜಾನುವಾರು ಕಾಲುಬಾಯಿ ರೋಗ ತಡೆ, 9ನೇ ಸುತ್ತಿನ ಮಾಸಿಕ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿ, ವಿಶ್ವ ಪಶು ವೈದ್ಯಕೀಯ ದಿನಾಚರಣೆಯಲ್ಲಿ ಅವರು, ಮಾತನಾಡಿದರು. ಕೃಷಿಕರ ಪರ್ಯಾಯ ಆದಾಯ ಮೂಲ, ಹೈನುಗಾರಿಕೆ ಉತ್ತೇಜಿಸಲು, ರಾಜ್ಯ ಸರ್ಕಾರ, ಪ್ರತಿ ಲೀಟರ್ ಹಾಲಿಗೆ, 4 ರೂಪಾಯಿ ಹೆಚ್ಚಿಸಿ, ಅನುಕೂಲ ಕಲ್ಪಿಸಿದೆ ಎಂದರು.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**'ಕ್ರೀಡೆಗಳು; ಸಿದ್ಧರಾಗಿ, ಹೊಂದಿಸಿ,** ನಾವಿನ್ಯತೆಯನ್ನು ಆವಿಷ್ಕರಿಸಿ' ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ಬೌದ್ಧಿಕ ಆಸ್ತಿ ಹಕ್ಕು ದಿನಾಚರಣೆ. ಇಂದು, ಏಪ್ರಿಲ್ 26, ವಿಶ್ವ ಬೌದ್ಧಿಕ ಆಸ್ತಿ ದಿನದಂದು, ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (WIPO) ಸದಸ್ಯ ರಾಷ್ಟ್ರಗಳು, ಪ್ರಪಂಚದ ಸಂಶೋಧಕರು ಮತ್ತು ಸೃಷ್ಟಿಕರ್ತರ ಕೊಡುಗೆಗಳನ್ನು ಆಚರಿಸುವ ಮೂಲಕ, ನಾವಿನ್ಯತೆ ಮತ್ತು ಸೃಜನಶೀಲತೆಯನ್ನು ಉತ್ತೇಜಿಸುತ್ತವೆ. ಹಕ್ಕುಸ್ವಾಮ್ಯ, ಟ್ರೇಡ್‌ಮಾರ್ಕ್, ಪೇಟೆಂಟ್, ವಿನ್ಯಾಸ ಮತ್ತು ವ್ಯಾಪಾರ ಚಿನ್ಹೆಗಳ ಪಾತ್ರದ ಬಗ್ಗೆ, ಜನ ಜಾಗೃತಿ ದಿನ.

<><><>

**ಪ್ರದೇಶ ಸಮಾಚಾರಕ್ಕಾಗಿ,** ಬೌದ್ಧಿಕ ಆಸ್ತಿ ಕುರಿತು, ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಹಿರಿಯ ತಜ್ಞ ನ್ಯಾಯವಾದಿ, ಡಾಕ್ಟರ್ ಎಂ.ಎನ್. ಭೀಮೇಶ.

<><><>

**ಡಾಕ್ಟರ್ ಎಂ.ಎನ್. ಭೀಮೇಶ ಧ್ವನಿ 60 ಸೆಕೆಂದುಗಳು**

<><><>

**ಆಕಾಶವಾಣಿಯ, ಜನಪ್ರಿಯ ಮಾಸಿಕ ಕಾರ್ಯಕ್ರಮ,** 'ಮನ್ ಕಿ ಬಾತ್'ನಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ ವಿದೇಶಗಳ ಭಾರತೀಯರನ್ನುದ್ದೇಶಿಸಿ, ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್‌ನ 133ನೇ ಆವೃತ್ತಿಯಾಗಿದೆ. ಆಕಾಶವಾಣಿ ಹಾಗೂ ದೂರದರ್ಶನದ ಎಲ್ಲ ವಾಹಿನಿಗಳು, ಆಕಾಶವಾಣಿ ಸುದ್ದಿ ಜಾಲತಾಣ ಮತ್ತು ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ಕಚೇರಿ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ವಾಹಿನಿಗಳಲ್ಲಿಯೂ, ನೇರ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆ ಬಳಿಕ, ಪ್ರಾದೇಶಿಕ ಭಾ ಗಳಲ್ಲೂ ಈ ಕಾರ್ಯಕ್ರಮ, ಬಿತ್ತರಗೊಳ್ಳಲಿದೆ.

<><><>

**ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ,** ಇಂದು ಬೆಳಗ್ಗೆ 10.30ಕ್ಕೆ, 'ದಿವಂಗತ ಡಾಕ್ಟರ್ ಬಿ.ಆರ್.ಹಿರೇಮಠರ ಸವಿನೆನಪು' ಕಾರ್ಯಕ್ರಮ ಆಯೋಜಿತವಾಗಿದೆ. ಗದಗ–ಡಂಬಳ ತೋಂಟದಾರ್ಯ ಮಠದ, ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ, ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪ ಕುಲಪತಿ, ಎ.ಮುರಿಗೆಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ರಾಜ್ಯದ ಅಥ್ಲೀಟ್,** ನೂಪುರ ಹೊಳ್ಳ, ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿತ, 24ನೇ ರಾಷ್ಟ್ರೀಯ ಕಿರಿಯರ ಅಥ್ಲೆಟಿಕ್ಸ್, 22 ವರ್ಷದೊಳಗಿನವರ ಕ್ರೀಡಾಕೂಟದಲ್ಲಿ, ಮಹಿಳೆಯರ 100 ಮೀಟರ್ಸ್ ಹರ್ಡಲ್ಸ್ ನಲ್ಲಿ, ಕಂಚಿನ ಪದಕ ಗೆದ್ದರು. ಕೂಟದಲ್ಲಿ ಕರ್ನಾಟಕ, ತನ್ಮೂಲಕ ಪದಕದ ಖಾತೆ ತೆರೆಯಿತು. ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಮತ್ತು ಭಾರತ ಅಥ್ಲೆಟಿಕ್ಸ್ ಫೆಡರೇಶನ್ ಆಶ್ರಯದಲ್ಲಿ ನಡೆಯುತ್ತಿರುವ, ಕೂಟದ ಎರಡನೇ ದಿನದ ಸ್ಪರ್ಧೆಯಲ್ಲಿ, ನೂಪುರ 14 ದಶಾಂಶ 2–2 ಸೆಕೆಂದುಗಳಲ್ಲಿ ಗುರಿ ತಲುಪಿದರು. ತಮಿಳುನಾಡಿನ ಯಾಮಿನಿ ಕಾರ್ತಿಕೇಯನ್, 13 ದಶಾಂಶ 7–9 ಸೆಕೆಂದುಗಳಲ್ಲಿ ಗುರಿ ತಲುಪಿ, ಚಿನ್ನದ ಪದಕಕ್ಕೆ, ಕೊರಳೊಡ್ಡಿದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಟಿ.ಸಿ.ಎಸ್. ವರ್ಲ್ಡ್‌–10ಕೆ ಮ್ಯಾರಥಾನ್,** ಬೆಂಗಳೂರಿನಲ್ಲಿ ಇಂದು ಬೆಳಗ್ಗೆ 5 ಗಂಟೆಗೆ ಆರಂಭವಾಗಿದೆ. ಮಧ್ಯಾಹ್ನ 1 ಗಂಟೆಯ ವರೆಗೆ ನಡೆಯುವ, ಮ್ಯಾರಥಾನ್ ನಲ್ಲಿ, ದೇಶ–ವಿದೇಶಗಳ, 30 ಸಾವಿರ ಅಥ್ಲೀಟ್‌ಗಳು ಭಾಗವಹಿಸಿದ್ದಾರೆ.

<><><>

**ಬಳ್ಳಾರಿಯ ನಾರಿ ಶಕ್ತಿ ಫೋರಂ,** ನಾರಿ ಶಕ್ತಿ ವಂದನಾ ಅಧಿನಿಯಮ ಜಾರಿಯಾಗದಂತೆ ತಡೆದ, ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ವಿರುದ್ಧ, ಜನಾಕ್ರೋಶ ಜಾಥಾ ನಡೆಸಿತು.

<><><>

**ರೇಲ್ವೆ ಖಾತೆ ರಾಜ್ಯ ಸಚಿವ** ವಿ.ಸೋಮಣ್ಣ, ತುಮಕೂರಿನ ಸರ್ಕಾರಿ ಕಿರಿಯ ಪದವಿಪೂರ್ವ ಕಾಲೇಜು ಮೈದಾನದಲ್ಲಿ, 'ನಶೆ ಮುಕ್ತ ಭಾರತ; ನಶೆ ಮುಕ್ತ ಕರ್ನಾಟಕ' ಹಾಗೂ 'ಯುವ ಶುದ್ಧಿ ಅಭಿಯಾನ'ಕ್ಕೆ, ಚಾಲನೆ ನೀಡಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಬೆಳಗಾವಿ ಜಿಲ್ಲೆ, ನಾಗರಗಾಳಿ ಗ್ರಾಮ** ಪಂಚಾಯಿತಿಗೆ, ಗಾಂಧಿ ಗ್ರಾಮ ಪುರಸ್ಕಾರದ, ಗರಿ.
- **ಬೆಳಗಾವಿ ಹಾಗೂ ಕಲಬುರ್ಗಿ ಜಿಲ್ಲೆಗಳಿಗೆ,** ತಲಾ 10 ಸಾವಿರ ಹಸು ಒದಗಿಸಲು, ಪಶು ಸಂಗೋಪನಾ ಇಲಾಖೆ, ಕ್ರಮ.
- **ಇಂದು, ವಿಶ್ವ ಬೌದ್ಧಿಕ ಆಸ್ತಿ ಹಕ್ಕು,** ದಿನಾಚರಣೆ.
- **ಮನ್ ಕಿ ಬಾತ್; 133ನೇ ಆವೃತ್ತಿ,** ಇಂದು ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>